# ರಾಯರು ಭಕ್ತರ ಭರವಸೆ




ಮಂತ್ರಾಲಯ ಆಂಧ್ರದಲ್ಲಿದ್ದರೂ ಕರ್ನಾಟಕದ ಭಕ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಆರಾಧಿಸುತ್ತಾರೆ. ಅದು ಕನ್ನಡದ ನೆಲದಲ್ಲಿಯೇ ಇದೆ ಎನ್ನುವಷ್ಟರ ಮಟ್ಟಿಗಿನ ಪ್ರೀತಿ ಭಕ್ತರದ್ದು. ರಾಜ್ಯದ ಗಡಿಯಿಂದ ಕೆಲವೇ ಕಿ.ಮೀ. ಮಾತ್ರ ದೂರವಿರುವ ಕಾರಣ ಹೊರರಾಜ್ಯದ ದೇವಾಲಯವೆಂದು ಎಂದೂ ಅನಿಸಿಲ್ಲ. ಏನೇ ಕಷ್ಟಗಳು, ವೈಯಕ್ತಿಕ ನೋವುಗಳು, ಹತಾಶೆಗಳು, ಇಂದಿಗೆ ನಮ್ಮ ಬದುಕು ಮುಗಿದೇ ಹೋಯಿತು ಎನ್ನುವ ಅತ್ಯಂತ ನಿಕೃಷ್ಟ ಸಂದರ್ಭದಲ್ಲಿಯೂ ಭಕ್ತರಿಗೆ ಬದುಕುವ ಭರವಸೆ ಮೂಡಿಸುವುದು ‘ರಾಯರಿದ್ದಾರೆ’ ಎನ್ನುವ ಒಂದೇ ಒಂದು ಮಾತು.

ಇದೇ ಕಾರಣದಿಂದಾಗಿ ಮಂತ್ರಾಲಯದಲ್ಲಿ ದೇವಸ್ಥಾನದ ಒಳಗಡೆ ವೃಂದಾವನಗಳ ದರ್ಶನಕ್ಕೆ ಹೋಗುವಾಗ ‘ನಮಗೆ ನೂರು ಕಷ್ಟಗಳು ಇವೆ ಎಂದು ರಾಯರ ಬಳಿ ಹೇಳಬೇಡಿ, ನಮ್ಮ ಬಳಿ ರಾಯರಿದ್ದಾರೆ ಎಂದು ಕಷ್ಟಗಳಿಗೇ ಹೇಳಿ’ ಎಂದು ಬರೆದಿರುವ ಭಕ್ತಿಪೂರ್ವಕ ಸಾಲುಗಳು ರಾಯರನ್ನೇ ನಂಬಿಕೊಂಡ ಬಂದ ಭಕ್ತರಲ್ಲಿ ನೆಮ್ಮದಿಯ ಭಾವ ಮೂಡಿಸುತ್ತವೆ. ನೂರು ಸಂಕಷ್ಟಗಳು ಕ್ಷಣಾರ್ಧದಲ್ಲಿ ಕರಗಿ ಭರವಸೆಯ ಹೊಂಗಿರಣ ಮೂಡುವಂತೆ ಮಾಡುತ್ತವೆ. ಈ ನಂಬಿಕೆಯಿಂದಲೇ ಕೋಟ್ಯಂತರ ಜನ ಮಂತ್ರಾಲಯಕ್ಕೆ ಹೋಗುತ್ತಾರೆ. ವಿದೇಶಗಳಿಂದಲೂ ಬಂದು ಭಕ್ತಿ ಸಮರ್ಪಿಸುತ್ತಾರೆ. ಮಧ್ವಾಚಾರ್ಯರ ಪರಂಪರೆಯಲ್ಲಿ ಬರುವ ಗುರು ರಾಘವೇಂದ್ರ ಸ್ವಾಮಿಗಳ ವೃಂದಾವನದಿಂದ ಮಂತ್ರಾಲಯ ಹೆಸರಾಗಿದೆ. ರಾಘವೇಂದ್ರ ಸ್ವಾಮಿಗಳ ಪವಿತ್ರ ಮನಸ್ಸಿನಿಂದ ಸುರಿದ ಸುಂದರವಾದ ಮಂತ್ರಗಳಿಂದಾಗಿ ಈ ಪಟ್ಟಣವನ್ನು ಮಂತ್ರಾಲಯ ಎಂದು ಮರುನಾಮಕರಣ ಮಾಡಲಾಯಿತು.

ಎಲ್ಲ ಧರ್ಮಗಳ, ಜಾತಿಗಳ ಜನ ಮಂತ್ರಾಲಯಕ್ಕೆ ನಡೆದುಕೊಳ್ಳುತ್ತಾರೆ. ಬಂದ ಎಲ್ಲ ಭಕ್ತರಿಗೂ ಮಠದಿಂದಲೇ ಪ್ರಸಾದದ ವ್ಯವಸ್ಥೆಯೂ ಇರುತ್ತದೆ. ಮಂತ್ರಾಲಯದ ಮಠದ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥ ಸ್ವಾಮೀಜಿಯೇ ಹೇಳಿದಂತೆ ‘ಇದು ಜಾತ್ಯತೀತ ಮಠ’. ಈಗಲೂ ರಾಯರ ವೃಂದಾವನದ ಮಂಟಪದ ಮೇಲ್ಭಾಗದಲ್ಲಿ ಗುಂಬಜ್ (ಮಸೀದಿಯ ಮೇಲ್ಭಾಗದಲ್ಲಿರುವಂತೆ) ಚಿತ್ರವಿದೆ. ಆದೋನಿಯ ನವಾಬ ರಾಯರ ತಪಃಶಕ್ತಿಗೆ ಮಾರುಹೋಗಿ ಈ ಜಾಗ ನೀಡಿದ ಸವಿ ನೆನಪಿಗಾಗಿ ರಾಯರೇ ಸ್ನೇಹಪೂರ್ವಕವಾಗಿ ಆಗಿನ ದಿವಾನರಾಗಿದ್ದ ವೆಂಕಯ್ಯ ಅವರಿಗೆ ಹೇಳಿ ಚಿತ್ರ ಮಾಡಿಸಿದ್ದರು ಎನ್ನುವ ಐತಿಹ್ಯವಿದೆ. ಇದು ಕ್ಷೇತ್ರದ ಭಾವೈಕ್ಯ ಹಾಗೂ ಸೌಹಾರ್ದತೆಗೆ ಸಾಕ್ಷಿಯಂತಿದೆ.

## ವಸ್ತು ಸಂಗ್ರಹಾಲಯ

ಮಂತ್ರಾಲಯದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಮಾಡಲಾಗಿರುವ ದಾಸ ಸಾಹಿತ್ಯ ವಸ್ತು ಸಂಗ್ರಹಾಲಯ ಕ್ಷೇತ್ರದ ಪೂರ್ಣ ಕಥೆಯನ್ನು ಹೇಳುತ್ತದೆ. ದಾಸ ಸಾಹಿತ್ಯದ ಮೂಲಕ ದೇಶದಾದ್ಯಂತ ಹಿಂದೂ ಧರ್ಮವನ್ನು ಪ್ರಚಾರ ಮಾಡುವ ಸಲುವಾಗಿ ಈಗಿನ ಸುಬುಧೇಂದ್ರ ತೀರ್ಥರು ದಾಸ ಸಾಹಿತ್ಯ ಯೋಜನೆ ಆರಂಭಿಸಿದ್ದಾರೆ.

ಸಂದೇಶ ಫಲಕಗಳು ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿವೆ. ದೇವಾನುದೇವತೆಗಳ ವಿಗ್ರಹಗಳು, ಬೃಹದಾಕಾರದ ಬೃಂದಾವನ ಭಕ್ತರ ಗಮನಸೆಳೆಯುತ್ತದೆ. ದಾಸ ಸಾಹಿತ್ಯ ಮತ್ತು ಹರಿದಾಸರ ಬದುಕನ್ನು ಪರಿಚಯಿಸುತ್ತದೆ. ಈ ಸಂಗ್ರಹಾಲಯದಲ್ಲಿ ದೇವರ ಸ್ತುತಿಗಳು, ತತ್ವಗಳು, ಮತ್ತು ಸಾಮಾಜಿಕ ವಿಚಾರಗಳ ನಾಮಫಲಕಗಳು ಇವೆ. ಹರಿದಾಸರ ಕೀರ್ತನೆಗಳು, ಪದಗಳು,

